**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ, ಅಂಕೋಲಾ.**

**ಸಿಸಿ ನಂಬರ 1100/2025**

**ಪಿರ್ಯಾದಿಃ** **ಸರಕಾರ**

**–ವಿರುದ್ಧ –**

**ಆರೋಪಿ** : ಉದಯ ತಂ. ದಾಮೋದರ ನಾಯ್ಕ,
ಪ್ರಾಯಃ 53 ವರ್ಷ, ವೃತ್ತಿಃ ಚಾಲಕ ,
ಸಾಃ ಬಂಡಿಬಜಾರ, ತಾಃ ಅಂಕೋಲಾ

**ಆಪಾದನೆ**

ದಿನಾಂಕಃ 14–10–2025 ರಂದು ರಾತ್ರಿ 07–50 ಗಂಟೆಗೆ ಅಂಕೋಲಾ ಪೋಲೀಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ಅಂಕೋಲಾ ತಾಲೂಕಿನ ಹಟ್ಟಿಕೇರಿ ಗ್ರಾಮದಲ್ಲಿ ಆರೋಪಿಯಾದ ನೀವು ಅಂಕೋಲಾ ತಾಲೂಕಿನ ಬೇಲೆಕೇರಿ ಕ್ರಾಸ್ ಹತ್ತಿರ ಸಾರ್ವಜನಿಕ ರಸ್ತೆಯ ಬದಿಯಲ್ಲಿರುವ ವಿದ್ಯುತ್ ಕಂಬದ ಹತ್ತಿರ ನಿಂತು ನಿಮ್ಮ ಲಾಭಕ್ಕೋಸ್ಕರ ಬರಹೋಗುವ ಸಾರ್ವಜನಿಕರನ್ನು ಕರೆಯುತ್ತಾ ತಮ್ಮ ತಮ್ಮ ಅದೃಷ್ಟದ ಸಂಖ್ಯೆಗಳ ಮೇಲೆ ಹಣ ಪಂಥ ಕಟ್ಟಿ ಅದೃಷ್ಟ ಸಂಖ್ಯೆ ತಾಗಿದರೆ 1 ರೂಪಾಯಿಗೆ 80 ರೂಪಾಯಿ ಕೊಡುವುದಾಗಿ ಹೇಳಿ ಅವರ ಮನವೊಲಿಸಿ ಸಾರ್ವಜನಿಕರಿಂದ ಅಕ್ರಮವಾಗಿ ಹಣ ಪಡೆದು ಅವರು ಹೇಳಿದ ಅಂಕೆ ಸಂಖ್ಯೆಯನ್ನು ನಿಮ್ಮ ಹತ್ತಿರ ಇರುವ ಚೀಟಿಯಲ್ಲಿ ಬರೆದುಕೊಂಡು ಓಸಿ ಮಟಕಾ ಜೂಗಾರಾಟ ಆಡಿಸುತ್ತೀರಿ. ಆ ಮೂಲಕ ಕರ್ನಾಟಕ ಪೋಲೀಸ್ ಕಾಯ್ದೆ ಕಲಂ. 78(3) ರಡಿಯಲ್ಲಿ ನನ್ನ ಸಂಜ್ಞೆಯ ವ್ಯಾಪ್ತಿಯಲ್ಲಿ ಅಪರಾಧ ಮಾಡಿರುತ್ತೀರಾ ಅಂತಾ ನಿಮ್ಮ ಮೇಲೆ ಆಪಾದನೆ ಇರುತ್ತದೆ.

ಪ್ರಶ್ನೆಃ 1 ನಿಮಗೆ ಓದಿ ಹೇಳಿದ ಆಪಾದನೆಯನ್ನು ಕೇಳಿದಿರಾ, ಅದು ನಿಮಗೆ ಅರ್ಥವಾಯಿತೇ?
ಉತ್ತರಃ

ಪ್ರಶ್ನೆ: 2 ಈ ಆಪಾದನೆಯನ್ನು ಒಪ್ಪಿಕೊಳ್ಳುವಿರೋ ಅಥವಾ ಇದಕ್ಕೆ ನಿಮ್ಮ ಪ್ರತಿವಾದ ಇದೆಯೇ?

ಉತ್ತರಃ

( ಮೇಲಿನ ಆಪಾದನೆಯನ್ನು ಆರೋಪಿಗೆ ಬಹಿರಂಗ ನ್ಯಾಯಾಲಯದಲ್ಲಿ ಓದಿ ಹೇಳಿ ತಿಳಿಸಿ ಅವರು ಕೊಟ್ಟ ಉತ್ತರವನ್ನು ಬರೆದುಕೊಳ್ಳಲಾಗಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.)

Sd/-

ದಿನಾಂಕಃ 13-03-2026 **(ಧನುರಾಜ್ ಎಸ್. ಎಂ.)**

ಅಂಕೋಲಾ **ಪ್ರಭಾರ ಪ್ರ. ದ. ನ್ಯಾ.ದಂ., ಅಂಕೋಲಾ.**

ಆರೋಪಿ ಸಹಿ.